ಓ ಎಸ್ ನಂಃ 388/14

ಪಿ. ಡಬ್ಲ್ಯೂ ಃ 1

ದಿಃ 2.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ 19, 22 ರಿಂದ 24 ಪರ ಶ್ರೀ ಕೆ ಟಿ ಜೆ ವಕೀಲರಿಂದ ಃ

ನನ್ನ ತಾತನ ಹೆಸರು ಹನುಮಯ್ಯ ಎಂದರೆ ಸರಿ. ಹನುಮಯ್ಯ ಇವರಿಗೆ ಇಬ್ಬರು ಹೆಂಡತಿಯರು. ಅವರೆಂದರೆ ನಂಜಮ್ಮ ಮತ್ತು 2ನೇಯವರು ಮಹಿಮಕ್ಕ. ನಂಜಮ್ಮ ಇವರಿಗೆ ವೆಂಕಟಸ್ವಾಮಿ ಎಂಬ ಒಬ್ಬ ಮಗನಿರುತ್ತಾನೆ. ಮಹಿಮಕ್ಕನಿಗೆ 4 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳಿರುತ್ತಾರೆ. ಅವರೆಂದರೆ ರಾಮರಸಯ್ಯ, ಆಂಜನಪ್ಪ, ಮರಿಚನ್ನಯ್ಯ, ಲೆಂಕಪ್ಪ ಅಲಿಯಾಸ್ ತಾತಯ್ಯ, ನಂಜಮ್ಮ ಮತ್ತು ಗಂಗಮ್ಮ ಇರುತ್ತಾರೆ. ನಮ್ಮ ತಾತ ಹನುಮಯ್ಯ ಬದುಕಿದ್ದಾಗ ಸಮಯದಲ್ಲಿ ನಂಜಮ್ಮ ಮತ್ತು ಮಹಿಮಕ್ಕ ಆಸ್ತಿ ವಿಚಾರವಾಗಿ ಜಗಳವಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರ ಬಗ್ಗೆ ತಿಳಿದುಕೊಳ್ಳಲು ನಾನು ಪ್ರಯತ್ನ ಮಾಡಿಲ್ಲ. ವೆಂಕಟಸ್ವಾಮಿ ಇವರು ಒಂದು ಕೇಸ್ ಹಾಕಿದ್ದರು, ಆ ಬಗ್ಗೆ ದಾಖಲೆ ಕೊಟ್ಟಿದ್ದೇನೆ, ಆದರೆ ಅದರ ನಂಬರ್ ನನಗೆ ನೆನಪಿಲ್ಲ. ಆ ಕೇಸ್ ನಲ್ಲಿ ನಾನು ಹಾಜರಾಗಿಲ್ಲ. ವೆಂಕಟಸ್ವಾಮಿ ಇವರು ಭಾಗಕ್ಕಾಗಿ ಕೇಸ್ ಹಾಕಿದ್ದರು.

ಮರಿಚನ್ನಯ್ಯ, ರಾಮರಸಯ್ಯ, ಆಂಜನಪ್ಪ ಮತ್ತು ನಮ್ಮ ತಂದೆ ಲೆಂಕಪ್ಪ ಇವರ ವಿರುದ್ದ ಕೇಸ್ ಮಾಡಿದ್ದರು. ಆ ಕೇಸ್ ಗೆ ನಾನು ಮತ್ತು ನಮ್ಮ ತಂದೆ ಹೋಗಿರಲಿಲ್ಲ ಎಂದರೆ ಸರಿ. ಆ ಪ್ರಕರಣದಲ್ಲಿ ಈ ಪ್ರಕರಣದ ಪ್ರತಿವಾದಿ 18 ಮತ್ತು ನಮ್ಮ ತಂದೆ ಜಂಟಿಯಾಗಿ ವಕಾಲತ್ ಹಾಕಿದ್ದರು ಎಂದರೆ ಸರಿ. ಅದನ್ನು ನಮ್ಮ ತಂದೆಗೆ ಗೊತ್ತಿಲ್ಲದಂತೆ ಕರೆದುಕೊಂಡು ಸಹಿ ಮಾಡಿಸಿಕೊಂಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ನನ್ನ ತಂದೆಯನ್ನು ಹೆದರಿಗೆ ಬೆದರಿಸಿ ವಕಾಲತ್ ಗೆ ಸಹಿ ಮಾಡಿಸಿಕೊಂಡಿದ್ದಾರೆಂದು ನಾನು ಅಥವಾ ನಮ್ಮ ತಂದೆ ದೂರು ಕೊಟ್ಟಿಲ್ಲ. ಓ ಎಸ್ 231/1996 ರಲ್ಲಿ ಪ್ರತಿವಾದಿ 18 ಮತ್ತು ನಮ್ಮ ತಂದೆ ಪ್ರತಿವಾದ ಪತ್ರ ಸಲ್ಲಿಸಿ ದಿನಾಂಕ ಃ 15.06.1967 ರಂದು ಹನುಮಯ್ಯನ ಮಕ್ಕಳು ವಿಲ್ ಮಾಡಿಕೊಟ್ಟು ಆಸ್ತಿಯನ್ನು ಭಾಗ ಮಾಡಿಕೊಟ್ಟಿದ್ದಾರೆ ಎಂದು ಬರೆಯಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನಿ ಡಿ 7 ವಿಲ್ ಇರುತ್ತದೆ ಎಂದರೆ ಸರಿ. ಎಂ ಆರ್ ಮತ್ತು ಆರ್ ಟಿ ಸಿ ಗಳಲ್ಲಿ ಜಂಟಿಯಾಗಿ ಎಲ್ಲ 4 ಜನ ಅಣ್ಣ ತಮ್ಮಂದಿರ ಹೆಸರು ಬರುತ್ತಿವೆ. ನಿ ಡಿ 3 ಎಂ ಆರ್ ದಾಖಲೆ ಇರುತ್ತದೆ ಎಂದರೆ ಸರಿ. ಹನುಮಯ್ಯ ಇವರು ನಂಜಮ್ಮ ನ ಮಕ್ಕಳಿಗೆ ಪ್ರತ್ಯೇಕವಾಗಿ ವಿಲ್ ಮಾಡಿದ್ದಾರೆ ಎಂದರೆ ಸರಿ. ಅದೇ ರೀತಿ ಮಹಿಮಕ್ಕನ ಮಕ್ಕಳಿಗೆ ಪ್ರತ್ಯೇಕ ವಿಲ್ ಮಾಡಿದ್ದಾರೆ ಎಂದರೆ ಸರಿ. ಆದರೆ ವಿಲ್ ಮೂಲಕ ಆಸ್ತಿ ಹಂಚಿಕೆಯಾಗಿದೆ ಎಂದರೆ ಸರಿಯಲ್ಲ. ನಿ ಡಿ 2 ಮತ್ತು 3 ರ ಪ್ರಕಾರ ಎಲ್ಲ ಮಕ್ಕಳು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆದರೆ ಆರ್ ಟಿ ಸಿಗಳು ಜಂಟಿಯಾಗಿ ಬರುತ್ತಿವೆ ಎಂದರೆ ಸರಿ. ಓ ಎಸ್ 231/1996 ಈಗಲೂ ಸಹ ಚಾಲ್ತಿಯಲ್ಲಿದೆ. ಆ ಕೇಸ್ ವಜಾವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಓ ಎಸ್ 231/1996 ರ ಬಗ್ಗೆ ನನಗೆ ಯಾವುದೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಆ ದಾವೆಯಲ್ಲಿ ಯಾರು ಯಾರು ಪಾರ್ಟಿಗಳಿದ್ದರು ಎಂದು ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ನಮ್ಮ ತಂದೆ 22 ನೇ ಪ್ರತಿವಾದಿ ಹಾಗೂ ಮರಿಚನ್ನಯ್ಯ 20 ನೇ ಪ್ರತಿವಾದಿ ಎಂದರೆ ಸರಿ.

ಹನುಮಯ್ಯನ ಎಲ್ಲ ಮಕ್ಕಳು ಬೇರೆ ಬೇರೆ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಒಟ್ಟಿಗೆ ವ್ಯವಸಾಯ ಮಾಡುತ್ತೇವೆ ಎಂದು ಸಾಕ್ಷಿ ಹೇಳುತ್ತಾರೆ. ವಿಲ್ ಮೂಲಕ ಬಂದ ಆಸ್ತಿಯಲ್ಲಿ ನಮ್ಮ ತಂದೆ ಮತ್ತು ನಾವು ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ವಿಲ್ ಕೊಟ್ಟ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದೇವೆ ಎಂದರೆ ಸರಿಯಲ್ಲ. ಮರಿಚನ್ನಯ್ಯ ಇವರು ಅವರಿಗೆ ಬಂದ ಆಸ್ತಿಯಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿಯಲ್ಲಿ ಎಲ್ಲರು ಮನೆ ಕಟ್ಟಿಕೊಂಡಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 4 ನ್ನು ನಮ್ಮ ತಾತ ಹನುಮಯ್ಯ ವ್ಯವಸಾಯ ಮಾಡುತ್ತಿದ್ದ ಬಗ್ಗೆ ದಾಖಲೆಯನ್ನು ಕೊಟ್ಟಿದ್ದೇವೆ. ಅದು ಮೂಲತಃ ವಿಜಯನಗರದ ಶ್ರೀನಿವಾಸ್ ಇವರ ಸ್ವತ್ತು ಇತ್ತು, ಅದನ್ನು 19 ನೇ ಪ್ರತಿವಾದಿ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಅದು ಶ್ರೀನಿವಾಸ್ ಇವರ ಸ್ವತ್ತು ಇರಬಹುದು, ಅದನ್ನು ನಮ್ಮ ತಾತ ವ್ಯವಸಾಯ ಮಾಡುತ್ತಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ಅದು 19 ನೆ ಪ್ರತಿವಾದಿ ಸ್ವಂತ ಆದಾಯದಿಂದ ಕ್ರಯಕ್ಕೆ ತೆಗೆದುಕೊಂಡ ಸ್ವತ್ತು ಎಂದರೆ ಸರಿಯಲ್ಲ.

ನಮ್ಮ ತಾತ ಒಟ್ಟು ಕುಟುಂಬದಲ್ಲಿದ್ದಾಗ ಭತ್ತ, ರಾಗಿ, ಗೋಧಿ , ಹುಣಸೇಹಣ್ಣು ಬೆಳೆದು ಆ ಸ್ವತ್ತನ್ನು ಕ್ರಯಕ್ಕೆ ತೆಗೆದುಕೊಂಡಿದ್ದೇವೆ. ಅದರ ಬಗ್ಗೆ ಲೆಕ್ಕ ಪತ್ರವನ್ನು ಇಟ್ಟುಕೊಂಡಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಐಟಂ ನಂಬರ್ 4 19 ನೆ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿಯಲ್ಲ. 19 ನೆ ಪ್ರತಿವಾದಿ ಹೆಸರಿನಲ್ಲಿ ಇದ್ದ ಖಾತೆಯನ್ನು ರದ್ದುಪಡಿಸಲು ಎ ಸಿ ಮತ್ತು ಡಿ ಸಿ ರವರ ಮುಂದೆ ನಾನು ಅರ್ಜಿ ಕೊಟ್ಟಿಲ್ಲ. ಏಕೆಂದರೆ ನನಗೆ ತಿಳುವಳಿಕೆ ಇರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ಕುಟುಂಬದಲ್ಲಿ ಇದ್ದ ಇತರೆ ಹಿರಿಯರಿಗೆ ತಿಳುವಳಿಕೆ ಇರಲಿಲ್ಲ. ಐಟಂ ನಂಬರ್ 4 ರ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಇರುತ್ತದೆ, ಅದರಲ್ಲಿ ನಮಗೆಪಿ ಭಾಗ ಬರಬೇಕೆಂದು ನಾವು 19 ನೆ ಪ್ರತಿವಾದಿಗೆ ನೋಟೀಸ್ ಕೊಟ್ಟಿದ್ದೇವು. ನಾನು ಹಾಜರುಪಡಿಸಿದ ದಾಖಲೆಗಳನ್ನು ನೋಡಿದರೆ ನನಗೆ ಗುರುತಿಸಲು ಆಗುವುದಿಲ್ಲ. ಆ ರೀತಿ ಯಾವುದೆ ನೋಟೀಸ್ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಸ.ನಂ. 31, ಸ.ನಂ. 33 ಮತ್ತು ಸ.ನಂ. 37 ಇವುಗಳನ್ನು ನಮ್ಮ ತಾತ ವ್ಯವಸಾಯ ಮಾಡುತಿದ್ದರು ಎಂದು ವಾದಪತ್ರದ 5 ನೆ ಪ್ಯಾರಾದಲ್ಲಿ ಬರೆಯಿಸಿದ್ದೇವೆ ಎಂದರೆ ಸರಿ. ಅ ಸ್ವತ್ತುಗಳು ಮೊದಲು ಪುಟ್ಟಗೌರಮ್ಮ ಇವರಿಗೆ ಸೇರಿದ ಸ್ವತ್ತುಗಳೆಂದರೆ ಸರಿಯಲ್ಲ. ನಮ್ಮ ತಾತನಿಗೆ ಸೇರಿದ ಸ್ವತ್ತುಗಳಲ್ಲ ಎಂದರೆ ಸರಿಯಲ್ಲ. ಅವುಗಳು ನಮ್ಮ ತಾತನಿಗೆ ಸೇರಿದ ಸ್ವತ್ತುಗಳೆಂದು ತೋರಿಸಲು ಆರ್ ಟಿ ಸಿ ಕೊಟ್ಟಿದ್ದೇನೆ. ನಾನು ಆ ತರಹದ ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಮ್ಮ ತಾತ ಸ.ನಂ. 31, ಸ.ನಂ. 33 ಮತ್ತು ಸ.ನಂ. 37 ಇವುಗಳಲ್ಲಿ ಯಾವತ್ತಿಗೂ ಸ್ವಾಧೀನದಲ್ಲಿರಲಿಲ್ಲ ಮತ್ತು ಹಕ್ಕುದಾರರು ಅಲ್ಲ ಎಂದರೆ ಸರಿಯಲ್ಲ. ಮರಿಚನ್ನಯ್ಯ ಇವರು ಪುಟ್ಟಗೌರಮ್ಮ ಇವರ ಸ್ವತ್ತುಗಳನ್ನು ಗೇಣಿ ಮುಖಾಂತರ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಎಲ್ಲರು ಸೇರಿ ಮಾಡುತ್ತಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ಅದಕ್ಕೆ ಪೂರಕವಾದ ದಾಖಲೆಗಳನ್ನು ಕೊಟ್ಟಿದ್ದೇನೆ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಸ್ವತ್ತುಗಳನ್ನು ಮಂಜೂರು ಮಾಡಲು ಮರಿಚನ್ನಯ್ಯ ಇವರು ಅರ್ಜಿ ಕೊಟ್ಟಿದ್ದರು ಎಂದರೆ ಸರಿ. ಅದನ್ನು ಒಟ್ಟು ಕುಟುಂಬದ ಪರವಾಗಿ ಕೊಟ್ಟಿದ್ದರು ಎಂದು ಸಾಕ್ಷಿ ಹೇಳುತ್ತಾರೆ.

ಕೇಸ್ ನಡೆಸಲು ಮರಿಚನ್ನಯ್ಯ ಇವರಿಗೆ ಅಧಿಕಾರ ಪತ್ರ ಕೊಟ್ಟಿರಲಿಲ್ಲ ಆದರೆ ಎಲ್ಲರೂ ಜೊತೆಯಲ್ಲಿದ್ದೆವು ಎಂದು ಸಾಕ್ಷಿ ಹೇಳುತ್ತಾರೆ.

ಮರಿಚನ್ನಯ್ಯ ಇವರು ಭೂ ನ್ಯಾಯ ಮಂಡಳಿ ಮುಂದೆ ಅರ್ಜಿ ಹಾಕಿದಾಗ ಅದರಲ್ಲಿ ನಾವು ಸಹ ಗೇಣಿದಾರರು ಇದ್ದೆವು ಎಂದು ಪ್ರತ್ಯೇಕ ಅರ್ಜಿ ಸಲ್ಲಿಸಿಲ್ಲ. ಆದರೆ ಅಲ್ಲಿ ಕೊಟ್ಟ ಹೇಳಿಕೆಯಲ್ಲಿ ಮರಿಚನ್ನಯ್ಯ ಇವರೇ ಒಟ್ಟಿಗೆ 4 ಜನ ಸಹೋದರರು ವ್ಯವಸಾಯ ಮಾಡುತ್ತಿದ್ದೇವು ಎಂದು ಹೇಳಿದ್ದಾರೆ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿಯ ಯಾವುದೆ ಹೇಳಿಕೆಯನ್ನು ಮರಿಚನ್ನಯ್ಯ ಹಾಕಿಲ್ಲ ಎಂದರೆ ಸರಿಯಲ್ಲ. 4 ಐಟಂ ಸ್ವತ್ತುಗಳಲ್ಲಿ ಸ.ನಂ. 31 ರಲ್ಲಿ 1 ಎಕರೆ 13 ಗುಂಟೆ, ಸ.ನಂ. 33 ರಲ್ಲಿ 3 ಎಕರೆ 9 ಗುಂಟೆ ಮತ್ತು ಸ.ನಂ. 37 ರಲ್ಲಿ 1 ಎಕರೆ 7 ಗುಂಟೆ ಮಂಜೂರಾಗಿತ್ತು ಎಂದರೆ ಸರಿ. ಮರಿಚನ್ನಯ್ಯ ಇವರ ಹೆಸರಿನಲ್ಲಿ ಮಂಜೂರಾದ ಆದೇಶವನ್ನು ಪ್ರಶ್ನಿಸಿ ಅಪೀಲು ಹಾಕಿಲ್ಲ ಆದರೆ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ.

ಮರಿಚನ್ನಯ್ಯ ಈಗ ತೀರಿಕೊಂಡಿದ್ದಾರೆ. ಅವರು ತೀರಿಕೊಂಡಾಗ 95 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಅವರಿಗೆ ವಯಸ್ಸಾಗಿದ್ದರಿಂದ ಮಕ್ಕಳ ಮದ್ಯೆ ಕಿತ್ತಾಟ ಬರಬಾರದು ಎಂಬ ಕಾರಣಕ್ಕೆ ಅವರಿಗೆ ಸೇರಿದ ಸ್ವತ್ತುಗಳನ್ನು ವಿಭಾಗ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಿನಾಂಕಃ 6.08.2012 ರಂದು ವಿಭಾಗವಾಗಿದೆ ಎಂದರೆ ಸರಿಯಲ್ಲ. ಅದು ಈಗಾಗಲೇ ನಿ ಡಿ 40 ಎಂದು ಗುರುತಿಸಲಾಗಿದೆ ಎಂದರೆ ಸರಿಯಲ್ಲ. ದಾವೆ ಹಾಕುವ ಮೊದಲು ಪ್ರತಿವಾದಿಗಳಿಗೆ ಭಾಗ ಕೊಡಿ ಎಂದು ನೋಟೀಸ್ ಕೊಟ್ಟಿಲ್ಲ. ಮೌಖಿಕವಾಗಿ ಕೇಳಿದ್ದೇವು ಎಂದು ಸಾಕ್ಷಿ ಹೇಳುತ್ತಾರೆ. ಅವರ ವಿರುದ್ದ ಪೊಲೀಸರಿಗೆ ದೂರು ಕೊಟ್ಟಿಲ್ಲ. ದಿನಾಂಕಃ 2.10.2011 ಮತ್ತು 3.10.2011 ಯಾವುದೆ ಘಟನೆ ನಡೆದಿಲ್ಲ ಎಂದರೆ ಸರಿ.

**ನ್ಯಾಯಾಲಯದ ಬೆಳಗ್ಗಿನ ಕಲಾಪ ಮುಕ್ತಾಯವಾಗಿದ್ದು ಮುಂದುವರೆದ ಪಾಟೀ ಸವಾಲಿಗಾಗಿ ಮಧ್ಯಾಹ್ನ ಕಾಲಾವಧಿಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**

**ಓ ಎಸ್ ನಂಃ 388/14**

**ಪಿ. ಡಬ್ಲ್ಯೂ ಃ 1**

**ದಿಃ 2.06.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ 19, 22 ರಿಂದ 24 ಪರ ಶ್ರೀ ಕೆ ಟಿ ಜೆ ವಕೀಲರಿಂದ ಃ**

ನಾನು ಕೊಟ್ಟ ವಂಶವೃಕ್ಷದಲ್ಲಿ ಹನುಮಯ್ಯನ 2 ನೆ ಹೆಂಡತಿಯ ಮಕ್ಕಳನ್ನು ಮಾತ್ರ ಸೇರಿಸಿದ್ದೇನೆ ಎಂದರೆ ಸರಿ. ಮೊದಲನೆ ಹೆಂಡತಿ ಮಕ್ಕಳನ್ನು ಸೇರಿಸಿಲ್ಲ ಎಂದರೆ ಸರಿ. ನಾವು 4 ಜನ ಸೇರಿ ದಾವೆ ಮಾಡಿದ್ದೇವೆ. ದಾವೆಯನ್ನು ಲೆಂಕಪ್ಪ , ಮರಿಚನ್ನಪ್ಪ ಮತ್ತು ಆಂಜನಪ್ಪ ಇವರು ವಾದಿಗಳಿರುತ್ತಾರೆ. ನಮ್ಮ ತಂದೆ ಲೆಂಕಪ್ಪ ಇವರಿಗೆ ಹನುಮಯ್ಯ ಮತ್ತು ದೇವರಾಜು ಎಂಬ ಇಬ್ಬರು ಮಕ್ಕಳಿರುತ್ತಾರೆ. ನಾನು ಮರಿಚನ್ನಪ್ಪ ಇವರನ್ನು ವಾದಿಗಳಾಗಿ ಸೇರಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೇವರಾಜು ನನ್ನ ಅಣ್ಣನಾಗಬೇಕು. ಈ ಕೇಸ್ ನ್ನು ನಡೆಸಲು ಅವರು ನನಗೆ ಯಾವುದೆ ಅಧಿಕಾರ ಬರೆದುಕೊಟ್ಟಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಸಲ್ಲಿಸಿದ ಎಲ್ಲ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

ನಮ್ಮ ತಾತ ವಿಲ್ ಮೂಲಕ ಆಸ್ತಿಗಳನ್ನು ಹಂಚಿಕೆ ಮಾಡಿ 40 ವರ್ಷಗಳಾದ ನಂತರ ಪ್ರತಿವಾದಿ 19 , 22 ರಿಂದ 24 ಇವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾವು ಆಂಜನಪ್ಪ, ರಾಮರಸಯ್ಯ ಇವರ ಮಕ್ಕಳು ಸೇರಿ ಪ್ರತಿವಾದಿ 19, 22 ರಿಂದ 24 ಇವರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಐಟಂ ನಂಬರ್ 4 ರ ಸ್ವತ್ತು ಮರಿಚನ್ನಯ್ಯ ಇವರು ಆ ಸ್ವತ್ತನ್ನು ಗೇಣಿದಾರರಾಗಿ ಅನುಭವಿಸುತ್ತಿದ್ದರಿಂದ ಭೂ ನ್ಯಾಯ ಮಂಡಳಿಯು ಅವರಿಗೆ ಪ್ರತ್ಯೇಕವಾಗಿ ಮಂಜೂರು ಮಾಡಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 4 ಮತ್ತು ಭೂ ನ್ಯಾಯ ಮಂಡಳಿಯಿಂದ ಮಂಜೂರಾತಿ ಮಾಡಿದ ಸ್ವತ್ತುಗಳಲ್ಲಿ ನಮಗೆ ಯಾವುದೆ ಹಕ್ಕು ಇಲ್ಲದೆ ಇದ್ದರೂ ಸಹ ಸುಳ್ಳು ದಾವೆ ಮಾಡಿ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃಪ್ರತಿವಾದಿ 10, 16 ಮತ್ತು 17 ರವರ ಪರವಾಗಿ ಎನ್ ಕೆ ವಕೀಲರಿಂದ ಃ**

ರಾಜು ಇವರು ರಾಮರಸಯ್ಯ ಇವರ ಮಗ ಇರುತ್ತಾರೆ. ವೆಂಕಟೇಶ್ ಮತ್ತು ಹನುಮಯ್ಯ ಆಂಜನಪ್ಪ ಇವರ ಮಕ್ಕಳಿರುತ್ತಾರೆ. ರಾಮರಸಯ್ಯ ಮತ್ತು ಆಂಜನಪ್ಪ ಇವರು ಹನುಮಯ್ಯ ಇವರ ಮಕ್ಕಳೆಂದರೆ ಸರಿ. ಹನುಮಯ್ಯನ ಎಲ್ಲ 4 ಮಕ್ಕಳು ಒಟ್ಟ ಕುಟುಂಬದಲ್ಲಿ ಇರುತ್ತಾರೆ ಎಂದರೆ ಸರಿ. ವಿಲ್ ಪ್ರಕಾರ ಯಾವುದೆ ಭಾಗ ಆಗಿಲ್ಲ ಎಂದರೆ ಸರಿ. ಭೂ ನ್ಯಾಯ ಮಂಡಲಿ ಮುಂದೆ ಅರ್ಜಿ ಕೊಟ್ಟವರು ನನ್ನ ದೊಡ್ಡಪ್ಪ ಮರಿಚನ್ನಯ್ಯ ಇರುತ್ತಾರೆ. ಹನುಮಯ್ಯ ಇವರ ಜೀವಿತ ಕಾಲದಿಂದಲೂ ನಿ ಪಿ 19 ರಲ್ಲಿರುವ ಸ್ವತ್ತನ್ನು ನಮ್ಮ ಕುಟುಂಬದವರು ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿ. ದಾವಾ ಐಟಂ ನಂಬರ್ 4 ಇದರ ಮಂಜೂರಾತಿ ಅರ್ಜಿಯಲ್ಲಿ ಮರಿಚನ್ನಯ್ಯ ಇವರು 4 ಜನ ಅಣ್ಣ ತಮ್ಮಂದಿರು ಸೇರಿ ವ್ಯವಸಾಯ ಮಾಡುತ್ತಿದ್ದೇವು ಎಂದು ಬರೆಯಿಸಿದ್ದಾರೆ ಎಂದರೆ ಸರಿ. ಸ.ನಂ. 33/1 , 33/2 , 34 ಮತ್ತು 37 ಇವುಗಳು ಜಂಟಿಯಾಗಿ ಮಂಜೂರು ಮಾಡಲು ಅರ್ಜಿ ಕೊಟ್ಟಿದ್ದರು ಎಂದರೆ ಸರಿ. ದಿನಾಂಕಃ 2.10.2011 ಮತ್ತು 8.10.2011 ರಂದು ನಮ್ಮ ತಂದೆ ಭಾಗ ಬೇಕೆಂದು ನನ್ನ ದೊಡ್ಡಪ್ಪನನ್ನು ಕೇಳಿದ್ದರು. ನಮ್ಮ ತಂದೆಯ ರೀತಿಯಲ್ಲಿ ರಾಮರಸಯ್ಯ ಮತ್ತು ಆಂಜನಪ್ಪ ಇವರ ಮಕ್ಕಳಿಗೂ ಭಾಗ ಬರಬೇಕೆಂದರೆ ಸರಿ. ಆ ರೀತಿ ಭಾಗ ಕೊಟ್ಟರೆ ನಮಗೆ ಯಾವುದೆ ರೀತಿಯ ತೊಂದರೆ ಇಲ್ಲ.

**ಪ್ರತಿವಾದಿ 25 ಮತ್ತು 33 ರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಪ್ರಕರಣ 2012 ರ ಪ್ರಕರಣವಾಗಿರುವುದರಿಂದ ಪಾಟೀ ಸವಾಲು ಮಾಡಲು ಅವಕಾಶ ನಿರಾಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**
**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**